ಪ್ರಯತ್ನಿಸಿದೆ. 'ಹೌದು, ಹೋಗಿದ್ದೆವು. ಲೀಸಾ ಕಾಲುಳುಕಿಸಿಕೊಂಡಳು' ಎಂದು ಫೋನಿನಲ್ಲಿ ಅವರಿಬ್ಬರ ಫೋಟೊ ತೋರಿಸಿದ. ಅವನದೇ ಎತ್ತರ, ಇಬ್ಬರದೂ ಒಂದೇ ಬಗೆಯ ಮೇಕಪ್ಪು. ಲೀಸಾಳದು ಸಣ್ಣ ಕೂದಲು. ಜತೆಗೆ ಹೆಗಲ ಮೇಲೆ ಕೈಹಾಕಿ ನಿಂತುಕೊಂಡು ಸೆಲ್ಫಿ ತೆಕ್ಕೊಂಡಿದ್ದರು.

ನನಗರಿವಿಲ್ಲದೇ ನನ್ನ ಕಣ್ಣು ಫೋಟೊದಲ್ಲಿದ್ದ ಆಕೆಯ ದೇಹದ ಮೇಲಿಂದ ಕೆಳಗೆ ಹರಿಯಿತು. ಈತ ಹೆಣ್ಣು ದೇಹವನ್ನು ಪಡಕೊಂಡು ಈಕೆ ಹೆಣ್ಣಾಗಿಯೇ ಉಳಿದರೆ ಇವರಿಬ್ಬರ ಗತಿ ಏನು?

ಹಾಗೇ ಹಿಂದೊರಗಿ ನನ್ನ ಫೋನಿನಲ್ಲಿ ಅಪ್‌ಟುಡೇಟ್ ಎಂಬ ಮೆಡಿಕಲ್ ಆಪ್ ತೆಗೆದು ಹಾಗೆಯೇ ಸುಮ್ಮನೆ ಅವಸರ ಅವಸರವಾಗಿ ಕಣ್ಣಾಡಿಸಿದೆ. ಗಂಡು ಹೆಣ್ಣಾಗುವ ಕ್ರಿಯೆಯಲ್ಲಿ ಪಡಕೊಳ್ಳುವುದು ನಿಯೋವಜೈನ – ನವನೂತನಯೋನಿ. ಆ ಶಸ್ತ್ರಕ್ರಿಯೆಯ ಒಂದು 30 ಸೆಕೆಂಡಿನ ಅನಿಮೇಟೆಡ್ ವಿಡಿಯೊ ಇತ್ತು. ಅದನ್ನು ನೋಡಿ ನನ್ನ ತೊಡೆಸಂದಿ 'ಔಚ್' ಎಂದು ನಲುಗಿತು.

ಇವನು ಪೂರಕ್ಕೆ ಪೂರ ಹೆಣ್ಣುದೇಹವನ್ನು ಪಡಕೊಂಡು ಈಕೆಯಾದರೆ, ಲೀಸಾಳ ಜತೆ ಕೂಡುವಿಕೆ ಹೇಗೆ? ಆಕೆ ಆತನಂತಾಗಬೇಕೋ, ಅಥವಾ ಇಬ್ಬರಿಗೂ ಹೆಣ್ಣುದೇಹ ಇಷ್ಟವೋ?

ನನ್ನ ಫೋನಿನ ಬಿಂಬ ನನ್ನ ಕನ್ನಡಕದಲ್ಲಿ ಕಂಡಿರಬೇಕು. 'ಸೂರಿ, ನೀನು ಅಷ್ಟು ತಲೆಕೆಡಿಸಿಕೊಳ್ಳಬೇಕಿಲ್ಲ.'

ಸಿಕ್ಕಿಹಾಕಿಕೊಂಡಂತೆ, 'ಕ್ಷಮಿಸು, ನಾನು ಕೊಂಚ ಹಳೆಯ ಕಾಲದವ. ನನ್ನ ತಲೆಯಲ್ಲಿ ಏನೇನೋ ಪ್ರಶ್ನೆಗಳು ಓಡುತ್ತಿವೆ. ನಾನು ನಿನ್ನ ಈ ಸ್ಥಿತ್ಯಂತರದ ಬಗ್ಗೆ ಡಾಕ್ಟರಾಗಿ ನೋಡುವುದನ್ನು ಬಿಡಬೇಕು ಎನ್ನಿಸುತ್ತಾ ಇದೆ' ಎಂದೆ.

'ಹೌದು ಅಷ್ಟೇ ಅಲ್ಲ. ನಾವಿಬ್ಬರೂ ಪರಸ್ಪರ ಪ್ರೀತಿಸುವ ಎರಡು ವ್ಯಕ್ತಿಗಳು ಮಾತ್ರ. ನಿನಗೆ ಗೊತ್ತಿದೆಯೋ ಇಲ್ಲವೋ ಸೂರಿ, ನನ್ನ ಮಗಳ ಕಾಲೇಜಿನ ಗುರುತಿನ ಚೀಟಿಯಲ್ಲಿ ಆಕೆಯ ಹೆಸರು ಮತ್ತು ಕೆಳಗೆ ಪ್ರಿಫರ್ಡ್ ಪ್ರೊನೌನ್ ಅಂದರೆ ಆಕೆಯಾಯ್ಕೆಯ ಸರ್ವನಾಮ–ಶಿ, ಹರ್, ಹರ್ಸ್ ಎಂದು ಬರೆಯಬೇಕು. ಅಲ್ಲಿ ನಿಮ್ಮ ಭಾರತದವನೇ ಒಬ್ಬ ವ್ಯಕ್ತಿಯನ್ನು ನೋಡಿದೆ. ಹೆಸರು ಅರವಿಂದ, ಆ ವ್ಯಕ್ತಿಯ ಪ್ರಿಫರ್ಡ್ ಪ್ರೊನೌನ್ ಕೂಡ ಶಿ, ಹರ್, ಹರ್ಸ್. ನಮ್ಮ ಲಿಂಗ ಹುಟ್ಟಿನಿಂದ ಬಂತು ಎನ್ನುವ ಕಾಲ ಹೋಯಿತು. ನನ್ನ ಲಿಂಗ ನನ್ನ ಆಯ್ಕೆ, ಅದಕ್ಕೆ ತಕ್ಕಂತೆ ನಮ್ಮ ನಾಮಪದ, ಸರ್ವನಾಮ ಬದಲಾಗುತ್ತೆ. ಅದು ವ್ಯಾಕರಣಬದ್ಧವಾಗಿರುವುದಕ್ಕೆ ಮಾತ್ರ. ನಾನು ನನಗೆ ಬೇಕಾದ ಸರ್ವನಾಮದತ್ತ ನಡೆದಿದ್ದೇನೆ. ಅದಕ್ಕೆ ತಕ್ಕ ಅಂಗಾಂಗಕ್ಕೆ ಹಪಾಪಿಸುತ್ತಿದ್ದೇನೆ. ಅಲ್ಲಿಯತನಕ ಇದೊಂದು ಸ್ಪೆಕ್ಟರ್ಮ್, ನಡುವೆ ವ್ಯಕ್ತವಾಗುವುದೆಲ್ಲ ಸತ್ಯವಲ್ಲ. ನನ್ನ ಈ ಪೂರಾ ಸ್ಪೆಕ್ಟ್ರಮ್ ಅನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಪ್ರೀತಿಸುವುದು ಲೀಸಾಗೆ ಗೊತ್ತು.' ಎಂದ. ನಾನು ಎಲ್ಲ ಅರ್ಥವಾದಂತೆ ನಕ್ಕೆ.

ಕಾನ್ಫರೆನ್ಸ್ ಶುರುವಾಯಿತು. ನಾನು ಮತ್ತೊಮ್ಮೆ ಬಾತ್‌ರೂಮಿಗೆ ಹೋಗಿ ಬರಲು ಎದ್ದು ನಿಂತೆ. ಮಾರಿಸ್ ಬರುತ್ತಾನಾ ನೋಡಿದೆ. ಆತ ಬರಲಿಲ್ಲ.

★★★

ಆದಿನ ಮತ್ತೆ ಮಾರಿಸ್ ನನಗೆ ಸಿಗಲಿಲ್ಲ. ಮತ್ತೊಮ್ಮೆ ಒಂದು ಪೇಶೆಂಟಿನ ಸಲುವಾಗಿ ಆತನನ್ನು ಸಂಪರ್ಕಿಸಬೇಕಾಗಿ ಬಂತು. ಇಷ್ಟರ ಮಧ್ಯೆ ವೆಸ್ಟ್‌ಹೆಲ್ತ್ ನಮ್ಮನ್ನು ಕೊಂಡಾಗಿತ್ತು. ನನಗೆ ಮಾರಿಸ್ ಆರುತಿಂಗಳ ಹಿಂದೆ ಒಂದು ಮೆಸೇಜು ಕಳಿಸಿದ್ದ. 'ಎಲ್ಲ ಸರಿಹೋಗುತ್ತಿದೆ.